ಸಾಕ್ಷಿದಾರರಿಗೆ ದಿನಾಂಕಃ 09.02.2016 ರಂದು ಕರೆಯಿಸಿ ಪ್ರಮಾಣ ವಚನ ಕೊಡಿಸಲಾಯಿತು.

ಪಾಟೀಸವಾಲು ಪ್ರತಿವಾದಿಯಪರ ವಕೀಲರಿಂದಃ-

ನಮ್ಮ ಸ್ಥಿರಸ್ವತ್ತನ್ನು ಗೃಹ ಪೈನಾನ್ಸ್‌ನವರು ಹರಾಜಿನಲ್ಲಿ ಮಾರಾಟ ಮಾಡುತ್ತಾರೆ ಅದನ್ನು ತಪ್ಪಿಸುವ ಸಲುವಾಗಿ ನಾವು ಅವರಿಗೆ ಹಣವನ್ನು ಕೊಡಬೇಕಾಗಿದೆ ಆದ್ದರಿಂದ ಹಣವನ್ನು ಸಾಲವನ್ನಾಗಿ ಕೊಡಿ ಎಂದು ಪ್ರತಿವಾದಿಯು ನನ್ನ ಪತ್ನಿಯನ್ನು ವಿನಂತಿಸಿದರೆಂದು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು. ನನ್ನ ಪತ್ನಿ ಗೃಹಿಣಿ ಎನ್ನುವುದು ನಿಜ. ನಿಮ್ಮ ಪತ್ನಿ 9 ಲಕ್ಷದಾ 80 ಸಾವಿರ ರೂಪಾಯಿ ಹಣ ಹೇಗೆ ಬಂದಿತು ಎನ್ನಲಾಗಿ ನಾನು ಅವರಿಗೆ ಕೊಟ್ಟಿದ್ದಂತಹ ಹಣವನ್ನು ಅವರು ಉಳಿತಾಯ ಮಾಡಿ ಇಟ್ಟಿದ್ದರು ಎನ್ನುವರು. ಅಷ್ಟೊಂದು ಹಣವನ್ನು ನಾನು ನನ್ನ ಪತ್ನಿಗೆ ಕೊಟ್ಟಿರಲಿಲ್ಲ ಎನ್ನುವುದು ಹಾಗೂ ಅವರು ಅಷ್ಟೊಂದು ಹಣವನ್ನು ಉಳಿತಾಯ ಮಾಡಿ ಇಟ್ಟಿರಲಿಲ್ಲ ಎನ್ನುವುದು ಸುಳ್ಳು. ನನ್ನ ಪತ್ನಿಗೆ 9 ಲಕ್ಷದಾ 80 ಸಾವಿರ ರೂಪಾಯಿ ಹಣವನ್ನು ಕೊಟ್ಟಿದ್ದೆ ಎಂದು ತೋರಿಸುವ ದಾಖಲೆಗಳಿಲ್ಲ. 3 ಲಕ್ಷ ರೂಪಾಯಿ ಹಣವನ್ನು ನಿಮ್ಮ ಸಂಬಂಧಿಕರು ಮತ್ತು ನಿಮ್ಮ ಪತ್ನಿಯ ಸ್ನೇಹಿತರು ನಿಮ್ಮ ಪತ್ನಿಗೆ ಬಳುವಳಿಯಾಗಿ ಕೊಟ್ಟಿದ್ದಾರೆ ಎಂದು ತೋರಿಸುವ ದಾಖಲೆ ಇಲ್ಲ ಎನ್ನಲಾಗಿ ಅದು ಸರಿಯಲ್ಲ ಎನ್ನುವರು. ಅದನ್ನು ತೋರಿಸುವ ದಾಖಲೆ ಇಲ್ಲ. ನಿಮ್ಮ ಪತ್ನಿಯ ವಿವಾಹದ ನಂತರ ನೀವು ಮತ್ತು ನಿಮ್ಮ ತಂದೆ 4 ಲಕ್ಷ ರೂಪಾಯಿ ಹಣವನ್ನು ನಿಮ್ಮ ಪತ್ನಿಗೆ ಕೊಟ್ಟಿದ್ದೀರಿ ಹಾಗೂ ಆ ಹಣವನ್ನು ನಿಮ್ಮ ಪತ್ನಿ ಶೇಖರಿಸಿಟ್ಟಿದ್ದರು ಎಂದು ತೋರಿಸುವ ದಾಖಲೆಗಳು ಇಲ್ಲ ಎನ್ನಲಾಗಿ ಹೌದು ಆದರೆ ಆ ಹಣವನ್ನು ಕಾಲಾನುಕ್ರಮವಾಗಿ ಸಂದರ್ಭಾನುಸಾರ ಕೊಟ್ಟಿರುತ್ತೇವೆ ಎನ್ನುವರು. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು. 2 ಲಕ್ಷದಾ 60 ಸಾವಿರರೂಪಾಯಿ ಹಣವನ್ನು ನಮ್ಮ ಪತ್ನಿ ಅವರ ಸಂಬಂಧಿಕರು ಮತ್ತು ಅವರ ಸ್ನೇಹಿತರಿಂದ ಪಡೆದಿದ್ದರು ಎಂದು ತೋರಿಸುವ ದಾಖಲೆಗಳು ಇಲ್ಲ. 2 ಲಕ್ಷದಾ 60 ಸಾವಿರರೂಪಾಯಿ

ಹಣವನ್ನು ನಮ್ಮ ಪತ್ನಿ ಅವರ ಸಂಬಂಧಿಕರು ಮತ್ತು ಅವರ ಸ್ನೇಹಿತರಿಂದ ಪಡೆದಿರಲ್ಲಿ ಎನ್ನುವುದು ಸುಳ್ಳು. ನಿಮ್ಮ ಪತ್ನಿಗೆ ಹಣವನ್ನು ಕೊಟ್ಟಂತಹ ಸಂಬಂಧಿಕರು ಮತ್ತು ಸ್ನೇಹಿತರ ಹೆಸರುಗಳನ್ನು ಹೇಳಬಲ್ಲಿರಾ ಎನ್ನಲಾಗಿ ಕೆಲವು ಹೆಸರುಗಳನ್ನು ಮಾತ್ರ ಹೇಳಬಲ್ಲೆ ಎನ್ನುವರು. ನನ್ನ ಸಹೋದರಿ ಶ್ರೀಮತಿ ಶಾಲಿನಿ, ನನ್ನ ಸಹೋದರನ ಮಗ ವಿನಾಯಕ, ನನ್ನ ಗಂಡು ಮಕ್ಕಳ ಸ್ನೇಹಿತರಾದ ರೋಹಿತ್ ಮುತಾಂದವರು ನನ್ನ ಪತ್ನಿಗೆ ಹಣವನ್ನು ಕೊಟ್ಟಿದ್ದಾರೆ. ಇವರು ಹೆಸರುಗಳನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ, ನಾನು ಸೃಷ್ಠಿಸಿಕೊಂಡಂತಹ ಹೆಸರುಗಳನ್ನು ಹೇಳಿದ್ದೇನೆ ಎನ್ನುವುದು ಸುಳ್ಳು. ನನ್ನ ಪತ್ನಿಯಿಂದ ಪ್ರತಿವಾದಿಯು ಹಣವನ್ನು ಪಡೆದು ಕೊಂಡಿಲ್ಲ ಎನ್ನುವುದು ಸುಳ್ಳು. ಪ್ರತಿವಾದಿಯು ಕಾಲಾನುಕ್ರಮವಾಗಿ ಉಳಿತಾಯ ಮಾಡಿದ ಹಣವನ್ನು ನಿಮಗೆ ಕೊಟ್ಟಿದ್ದರು ಅದೇ ಹಣವನ್ನು ನೀವು ಗೃಹ ಫೈನಾನ್ಸ್‌ಗೆ ಜಮಾ ಮಾಡಿ ಆ ಹಣವನ್ನು ನಾವು ಪ್ರತಿವಾದಿಗೆ ಸಾಲವನ್ನಾಗಿ ಕೊಟ್ಟಿದ್ದೇವೆ ಎಂದು ನೀವು ಸುಳ್ಳು ನುಡಿಯುತ್ತಿದ್ದೀರಿ ಎನ್ನಲಾಗಿ ಅದು ಸುಳುಳ ಎನ್ನುವರು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೆ ಕೆ ಸರಿ ಅದೆ, ನನ್ನ ಸಮಕ್ಷಮ,

2ನೇ ಹೆಚ್ಚುವರಿ ಹಿ. ದಿ. ನ್ಯಾಯಾಧೀಶರು, ಹುಬ್ಬಳ್ಳಿ.